
**ನರ್ಸ್:** ಡಾಕ್ಟ್ರೇ ಆ ರೋಗಿಗೆ ಕಾಲು ಆಪರೇಷನ್ ಆಗಬೇಕು. ಆದ್ರೆ ಅನಸ್ತೇಷಿಯಾ ಸ್ಟಾಕ್ ಇಲ್ಲ. ಏನು ಮಾಡುವುದು?
**ಡಾಕ್ಟರ್:** ಅಯ್ಯೊ ಅದಕ್ಯಾಕೆ ಅಷ್ಟೊಂದು ಚಿಂತೆ. ಭರ್ಜರಿ ಡಾಟಾ ಪ್ಯಾಕ್ ಹಾಕಿಸಿ ಕೈಗೊಂದು ಮೊಬೈಲ್ ಕೊಡಿ. ಏನು ಕತ್ತರಿಸಿದರು ಗೊತ್ತಾಗಲ್ಲ.

**ಗುಂಡ:** ಅಪ್ಪ, ಪಕ್ಕದ ಮನೆ ತಿಮ್ಮನಿಗೆ ಗಂಡು ಮಗು ಆಯ್ತಂತೆ.
**ಅಪ್ಪ:** ಅದಕ್ಕೇನೀಗಾ?
**ಗುಂಡ:** ಮತ್ತೆ ನಾನು ಚಿಕ್ಕವನಿದ್ದಾಗ ಪಕ್ಕದ ಮನೆ ತಿಮ್ಮನ ನೋಡಿ ಕಲಿತುಕೋ ಅಂತಿದ್ಯಲ್ಲಪ್ಪ.

**ಟೀಚರ್:** ಗುಂಡ ನಿನಗೆ ಪುನರ್ಜನ್ಮದ ಬಗ್ಗೆ ನಂಬಿಕೆ ಇದೆಯಾ?
**ಗುಂಡ:** ಹೌದು ಟೀಚರ್ ಯಾಕೆ?
**ಟೀಚರ್:** ಏನು ಇಲ್ಲ, ಮೊನ್ನೆ ನೀನು ನಿಮ್ಮ ಅಜ್ಜನ ಅಂತ್ಯಕ್ರಿಯೆಗೆಂದು ರಜೆ ಹಾಕಿದ್ದಿಯಲ್ಲ ನಿನ್ನ ಅಜ್ಜ ಇವತ್ತು ನಿನ್ನ ಕೇಳಿಕೊಂಡು ಶಾಲೆಗೆ ಬಂದಿದ್ರು.






**ಮಗ:** ಅಮ್ಮ ನಾನು ಹೊಳೆಯಲ್ಲಿ ಈಜುತ್ತೇನೆ.
**ಅಮ್ಮ:** ಬೇಡ ಕಂದಾ ಹೊಳೆಯಲ್ಲಿ ತುಂಬಾ ಮೊಸಳೆಗಳಿವೆಯಂತೆ.
**ಮಗ:** ಮತ್ತೆ ಅಪ್ಪ ಈಜ್ತಾ ಇದ್ದಾರೆ.
**ಅಮ್ಮ:** ಅವರು ಎಲ್ಐಸಿ ಮಾಡ್ಸಿದ್ದಾರೆ. ಅದರ ನಾಮಿನಿ ನನ್ನ ಹೆಸರಲ್ಲಿದೆ.

**ಟೀಚರ್:** ಗುಂಡ ನಿನಗೆ ಯಾವ ಪ್ರಾಣಿ ಅಂದರೆ ತುಂಬಾ ಇಷ್ಟ?
**ಗುಂಡ:** ಬೆಕ್ಕು ಇಷ್ಟ ಮೇಡಂ.
**ಟೀಚರ್:** ಯಾವ ಕಾರಣಕ್ಕೆ ನಿನಗೆ ಬೆಕ್ಕು ಇಷ್ಟ?
**ಗುಂಡ:** ಏಕೆಂದರೆ ಅದು ಅಡ್ಡ ಬಂದ್ರೆ ನಮ್ಮ ಅಜ್ಜಿ ನನ್ನ ಶಾಲೆಗೆ ಕಳುಹಿಸಲ್ಲ. ವಾಪಸ್ ಮನೆಗೆ ಕರೆದುಕೊಂಡು ಹೋಗುತ್ತಾರೆ.

**ಕಲ್ಲೇಶಿ:** ನನ್ನ ಅಂತರಾಳದ ಕಷ್ಟಗಳನ್ನು ಯಾರತ್ರ ಹೇಳಲಿ.
**ಮಲ್ಲೇಶಿ:** ಯಾರತ್ರಾನೂ ಹೇಳ್ಬೇಡ, ವಾಟ್ಸ್‌ಆ್ಯಪ್ ಸ್ಟೇಟಸ್‌ಗೆ ಹಾಕು.

ಸಂಗ್ರಹ: ಶರದ ಕುಲಕರ್ಣಿ, ಬೀದರ್

**ಶಿಕ್ಷಕ:** ಗಟ್ಟಿಯಾದ ನಿರ್ಧಾರ ಹಾಗೂ ಆತ್ಮವಿಶ್ವಾಸವಿದ್ದರೆ ಮರಳಿನಿಂದಲೂ ನೀರನ್ನು ತೆಗೆಯಬಹುದು.
**ವಿದ್ಯಾರ್ಥಿ:** ಆದರೆ ನಾನು ಉಕ್ಕಿನಿಂದ ನೀರನ್ನು ತೆಗೆಯುತ್ತೇನೆ.
**ಶಿಕ್ಷಕ:** ಉಕ್ಕಿನಿಂದ ನೀರೆ? ಅದು ಹೇಗೆ?
**ವಿದ್ಯಾರ್ಥಿ:** ಹ್ಯಾಂಡ್ ಪಂಪಿನಿಂದ.

**ಕೈದಿ 1:** 'ಪೊಲೀಸರು ನಿನ್ನನ್ನು ಹೇಗೆ ಬಂಧಿಸಿದರು?
**ಕೈದಿ 2:** ಬ್ಯಾಂಕೊಂದನ್ನು ಲೂಟಿ ಮಾಡಿ ಅಲ್ಲಿದ್ದ ಹಣವನ್ನು ಅಲ್ಲಿಯೇ ಕೂತು ಎಣಿಸುತ್ತಿದ್ದೆ. ಅಷ್ಟರಲ್ಲಿ ಅಲ್ಲಿಗೆ ಬಂದ ಪೊಲೀಸರು ನನ್ನನ್ನು ಬಂಧಿಸಿದರು.
**ಕೈದಿ 1:** ಲೂಟಿ ಮಾಡಿದ ಬಳಿಕ ಅಲ್ಲಿಂದ ಹೋಗದೇ ಅಲ್ಲೇ ಕೂತು ಏಕೆ ಹಣ ಎಣಿಸುತ್ತಿದ್ದೆ?
**ಕೈದಿ 2:** ಕೌಂಟರ್ ಬಿಡುವ ಮೊದಲೇ ನಿಮ್ಮ ಹಣವನ್ನು ಎಣಿಸಿಕೊಳ್ಳಿ ಎಂದು ಬರೆದಿದ್ದ ಬೋರ್ಡ್ ಅಲ್ಲಿ ಹಾಕಲಾಗಿತ್ತು. ಅದಕ್ಕೆ...

**ಡೆಂಟಿಸ್ಟ್:** ನಿಮ್ಮ ಈ ಮೂರು ಹಲ್ಲುಗಳು ಮುರಿದದ್ದು ಹೇಗೆ?
**ಗುಂಡ:** ನನ್ನ ಹೆಂಡತಿ ಖಡಕ್ ರೊಟ್ಟಿ ಮಾಡಿದ್ದಳು.
**ಡೆಂಟಿಸ್ಟ್:** ಖಡಕ್ ರೊಟ್ಟಿಯನ್ನು ಯಾಕೆ ತಿಂದೆ. ಬೇಡ ಅನ್ನಬಹುದಿತ್ತಲ್ಲವೇ?
**ಗುಂಡ:** ಬೇಡ ಅಂದಿದ್ದರ ಪರಿಣಾಮವೇ ಹಲ್ಲುಗಳು ಮುರಿಯಲು ಕಾರಣ.

**ಬಾಯ್ ಫ್ರೆಂಡ್:** ಬಾ ನಿನ್ನನ್ನು ಚಂದ್ರನ ಮೇಲೆ ಕರೆದುಕೊಂಡು ಹೋಗುತ್ತೇನೆ.
**ಗರ್ಲ್ ಫ್ರೆಂಡ್:** ಇಲ್ಲ ನಾನು ಬರುವುದಿಲ್ಲ.
**ಬಾಯ್ ಫ್ರೆಂಡ್:** ಏಕೆ?
**ಗರ್ಲ್ ಫ್ರೆಂಡ್:** ಅಲ್ಲಿ ವಾಟ್ಸ್‌ಆ್ಯಪ್ ಬರಲ್ಲ.

**ಮಿಸ್:** ಚಿಂಟೂ ನೀನು ಸ್ಕೂಲಿಗೆ ತಡವಾಗಿ ಏಕೆ ಬಂದೆ?
**ಚಿಂಟು:** ಶಾಲೆಯ ಬಳಿ ಇದ್ದ ಸೈನ್ ಬೋರ್ಡಿನ ಕಾರಣದಿಂದ.
**ಮಿಸ್:** ಸೈನ್ ಬೋರ್ಡಿನ ಕಾರಣದಿಂದಲೇ, ಅದು ಹೇಗೆ?
**ಚಿಂಟು:** ಮುಂದೆ ಶಾಲೆಯಿದೆ ನಿಧಾನವಾಗಿ ಚಲಿಸಿ ಅಂತ ಅದರಲ್ಲಿ ಬರೆದಿತ್ತು ಮಿಸ್. ಅದಕ್ಕೆ ಸ್ಕೂಲಿಗೆ ತಡವಾಗಿ ಬಂದೆ.

**ಪತ್ನಿ:** ಎರಡು ಕೆ.ಜಿ. ಬಟಾಣಿ ತೆಗೆದುಕೊಳ್ಳಲೇ?
**ಪತಿ:** ನಿನಗೆ ತೋಚಿದಂತೆ ಮಾಡು. ನನ್ಯಾಕೆ ಕೇಳುತ್ತಿದ್ದೀಯಾ?
**ಪತ್ನಿ:** ಹಾರಿಕೆ ಉತ್ತರ ಬೇಡ. ಎರಡು ಕೆ.ಜಿ ಬಟಾಣಿ ಸುಲಿಯುತ್ತೀರೋ ಇಲ್ಲವೋ ಅದನ್ನು ಮೊದಲು ಹೇಳಿ.

ಸಂಗ್ರಹ: ಮುರಲೀಧರ ಕುಲಕರ್ಣಿ, ಬೀದರ್